# ಸಮಗ್ರ ಶಿಕ್ಷಣ ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಶಾ.ಶಿ.ಮ.ಸಾ.ಇ/ಮಾ&ದಾ/ಇತರೆ/2022-23 ದಿನಾಂಕ: 17.05.2023

ಜ್ಞಾಪನ

ವಿಷಯ : ಜೂನ್ ರಿಂದ ಆಗಷ್ಟ ಮಾಹೆಗಳಲ್ಲಿ ಬರುವ ವಿಶಿಷ್ಟ ದಿನಾಚರಣೆಯನ್ನು ಶಾಲೆಗಳಲ್ಲಿ ಆಚರಿಸುವ ಬಗ್ಗೆ.

~*~*~*~*

ಮೇಲಿನ ವಿಷಯದನ್ವಯ ಈ ಮೂಲಕ ತಿಳಿಸುವುದೇನೆಂದರೆ ಜೂನ್ 2023 ರಿಂದ ಆಗಷ್ಟ 2023 ಮಾಹೆಗಳಲ್ಲಿ ಈ ಕೆಳಕಾಣಿಸಿರುವ ವಿಶಿಷ್ಟ ದಿನಾಚರಣೆಗಳು ಬರಲಿದ್ದು ಇವುಗಳ ಬಗ್ಗೆ ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ಮತ್ತು ಆ ದಿನದ ಮಹತ್ವವನ್ನು ತಿಳಿಸುವುದರ ಪ್ರಯುಕ್ತ, ಶಾಲೆಗಳಲ್ಲಿ ಪ್ರಾರ್ಥನಾ ಸಮಯ ಅಥವಾ ಆ ದಿನದ ಯಾವುದಾರು ನಿರ್ಧಿಷ್ಟ ಅವಧಿಯಲ್ಲಿ ಆಚರಿಸುವ ಬಗ್ಗೆ ಶಾಲಾ ಮುಖ್ಯಸ್ಥರಿಗೆ ಸೂಕ್ತ ಮಾರ್ಗದರ್ಶನ ನೀಡಲು ಈ ಮೂಲಕ ಸೂಚಿಸಿದೆ.

| ಕ್ರ. ಸಂ | ದಿನಾಂಕ | ದಿನಾಚರಣೆಯ ವಿಷಯ | ವೈಶಿಷ್ಟತೆ |
|---|---|---|---|
| 1. | 05.06.2023 | ವಿಶ್ವ ಪರಿಸರ ದಿನ | • ವಿಶ್ವ ಪರಿಸರ ದಿನಾಚರಣೆಯನ್ನು ವನಮಹೋತ್ಸವ ಎಂದು ಕರೆಯಲಾಗುತ್ತದೆ.<br>• ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮೂಡಿಸುವಂತಹ ಕವನಗಳ ರಚನೆ, ಪ್ರಬಂಧ, ಭಾಷಣ, ಘೋಷಣೆ, ಕರಪತ್ರ ರಚನೆ, ವಸ್ತು ಪ್ರದರ್ಶನಗಳನ್ನು ಇಕೋ ಕ್ಲಬ್ ಮುಖಾಂತರ ಆಚರಿಸುವುದು. |
| 2. | 12.06.2023 | ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ | • ಬಾಲ ಕಾರ್ಮಿಕ ನಿಷೇದ ಮತ್ತು ನಿಯಂತ್ರಣ ಕಾಯ್ದೆಯ ಬಗ್ಗೆ ತಿಳುವಳಿಕೆ ನೀಡುವಂತಹ ಕಾರ್ಯಕ್ರಮ<br>• ಬಾಲ ಕಾರ್ಮಿಕ ಪದ್ಧತಿಗೆ ಸಂಬಂದಿಸಿದ ಕಿರು ನಾಟಕ ಪ್ರದರ್ಶನ, ಸಮೀಕ್ಷೆಗಳನ್ನು ಏರ್ಪಡಿಸುವುದು, ಶಿಕ್ಷಣದ ಬಗ್ಗೆ ಅರಿವು ಮೂಡಿಸುವಂತಹ ಜಾಥ ಮುಂತಾದ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಹಮ್ಮಿಕೊಳ್ಳುವುದು. |
| 3. | 21.06.2023 | ಅಂತರಾಷ್ಟ್ರೀಯ ಯೋಗ ದಿನಾಚರಣೆ | • ಯೋಗ ದಿನದ ಇತಿಹಾಸ, ಮಹತ್ವದ ಬಗ್ಗೆ ಹಾಗೂ ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸಗಳ ಬಗ್ಗೆ ಪರಿಚಯ ಕಾರ್ಯಕ್ರಮ.<br>• ವಿವಿಧ ಸಂಘ ಸಂಸ್ಥೆಗಳ ಸಯೋಗದೊಂದಿಗೆ ಶಾಲೆಗಳಲ್ಲಿ ಯೋಗ ದಿನ ಆಚಾರಣೆ ಮಾಡುವುದು.<br>• ಪ್ರತಿ ನಿತ್ಯದ ದಿನಚರಿಯಲ್ಲಿ ಯೋಗಾಭ್ಯಾಸದ ಮಹತ್ವದ ಬಗ್ಗೆ ಅರಿವು ಮೂಡಿಸುವುದು.<br>• ಸ್ವಸ್ಥ ದೇಹ, ಸ್ವಸ್ಥ ಮನಸ್ಸಿನ ಬಗ್ಗೆ ಮಾರ್ಗದರ್ಶನ. |
| 4. | 11.07.2023 | ವಿಶ್ವ ಜನಸಂಖ್ಯಾ ದಿನ | • ಆರೋಗ್ಯಕರ ಜೀವನ ಮತ್ತು ಸಣ್ಣ ಕುಟುಂಬಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು. ಜನಸಂಖ್ಯಾ ಸ್ಫೋಟದಿಂದಾಗುವ ಅಪಾಯಗಳು, ಕುಟುಂಬ ಯೋಜನೆ ಅದ್ಯತೆ, ಲಿಂಗ ಅಸಮಾನತೆ, ಬಡತನ, ಶಿಶು ಮರಣ ಮಾನವ ಹಕ್ಕುಗಳು ಮತ್ತಿತರ ಸಂಗತಿಗಳಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.<br>• ವಿಶ್ವ ಜನಸಂಖ್ಯಾ ದಿನದದಂದು ವಿಶ್ವ ಸಂಸ್ಥೆಯು ಜನಸಂಖ್ಯಾ ದಿನಾಚರಣೆಯ ಉಲ್ಲೇಖಿಸಿರುವ ಉದ್ದೇಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮಗಳ ಆಯೋಜನೆ. |

| | | | |
|---|---|---|---|
| 5. | 12.07.2023 | ಮಲಾಲಾಯೂಸುಫ್ ಝಾಯಿ ದಿನ | • ಜುಲೈ 12ರ ದಿನವನ್ನು ನೋಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಮಲಾಲಾರವರ ಹುಟ್ಟಿದ ದಿನವನ್ನಾಗಿ ಆಚಾರಿಸಲಾಗುತ್ತದೆ.<br>• ಮಹಿಳಾ ಶಿಕ್ಷಣ ಕಾರ್ಯಕರ್ತೆಯಾಗಿ, ವಿಶ್ವದ ಅತ್ಯಂತ ಕಿರಿಯ ನೋಬೆಲ್ ಪ್ರಶಿಸ್ತಿ ವಿಜೇತರಾದ ಇವರ ಬಗ್ಗೆ ಹಾಗೂ ಇತರೆ ಮಹಿಳಾ ನೋಬೆಲ್ ವಿಜೇತರ ಮತ್ತುಅವರ ಹೋರಾಟದ ಬಗ್ಗೆ ಪರಿಚಯಿಸುವುದು ಈ ದಿನದ ವೈಶಿಷ್ಟತೆ<br>• ಇದೇ ರೀತಿ ಮಹಿಳಾ ಹೋರಾಟಗಾರರಾದ ಸಾವಿತ್ರಿ ಬಾಯಿ ಫುಲೆ, ಸರೋಜಿನಿ ನಾಯ್ಡು ಇವರುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ನೀಡುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು. |
| 6. | 18.07.2023 | ನೆಲ್ಸನ್ ಮಂಡೇಲಾ ಅಂತರಾಷ್ಟ್ರೀಯ ದಿನಾಚರಣೆ | • ವರ್ಣಬೇಧ ನೀತಿಗಳ ವಿರುದ್ಧ ಹೋರಾಟ ಮಾಡಿದ್ದ ಮಂಡೇಲಾ ರವರ ಹೋರಾಟ ಜೀವನದ ಬಗ್ಗೆ ಪರಿಚಯವನ್ನು ಭಾಷಣ, ಪ್ರಬಂಧ ರಚನೆ ಮುಂತಾವುದರ ಮೂಲಕ ಶಾಲೆಗಳಲ್ಲಿ ಏರ್ಪಡಿಸಿ ಮೂಲಕ ಅವರ ವ್ಯಕ್ತಿತ್ವವನ್ನು ಪರಿಚಯಿಸುವುದು. |
| 7. | 28.07.2023 | ವಿಶ್ವ ಪ್ರಕೃತಿಸಂರಕ್ಷಣಾ ದಿನಾಚರಣೆ | • ಪ್ರಕೃತಿ ಸಂರಕ್ಷಣೆ, ಜಾಗತಿಕ ತಾಪಮಾನದ ಬಗ್ಗೆ,ಭೂಮಿಯ ವಿವಿಧ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ,ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆಯ ಬಗ್ಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಇಕೋ ಕ್ಲಬ್ ಮೂಲಕ ಆಚರಿಸುವುದು. |
| 8. | 09.08.2023 | ಕ್ವಿಟ್ ಇಂಡಿಯಾ ಚಳುವಳಿ ದಿನ | • ಗಾಂಧೀಜಿಯವರ " ಮಾಡು ಇಲ್ಲವೇ ಮಡಿ" ಕರೆಯ ಮಹತ್ವ, ಭಾರತ ಬಿಟ್ಟು ತೊಲಗಿ ಚಳುವಳಿಯ ಉದ್ದೇಶಗಳನ್ನು ವಿದ್ಯಾರ್ಥಿಗಳಿಗೆ ಕಿರು ನಾಟಕಗಳ ಮುಖೇನ, ಭಾಷಣದ ಮೂಲಕ ಈ ದಿನದ ಮಹತ್ವವನ್ನು ನೀಡುವಂತಹ ಕಾರ್ಯಕ್ರಮಗಳ ಆಯೋಜನೆ ಮಾಡುವುದು. |
| 10. | 15.08.2023 | ಸ್ವಾತಂತ್ರ ದಿನಾಚರಣೆ | • ಸ್ವಾತಂತ್ರ ದಿನಾಚರಣೆಯ ಇತಿಹಾಸ, ಮಹತ್ವ ಮತ್ತು ಪ್ರಾಮುಖ್ಯತೆಯ ಬಗ್ಗೆ ಕಾರ್ಯಕ್ರಮಗಳ ಆಯೋಜನೆ ಮಾಡುವುದು. |
| 11. | 29.08.2023 | ರಾಷ್ಟ್ರೀಯ ಕ್ರೀಡಾ ದಿನಾಚರಣೆ | • ಮೇಜರ್ ಧ್ಯಾನ್ ಚಂದ್ ರವರ ಸ್ಮರಣಾರ್ಥ ಅವರ ಆತ್ಮಚರಿತೆ ಹಾಗೂ ಕ್ರೀಡಾ ಜಗತ್ತಿಗೆ ಅವರು ನೀಡಿರುವ ಕೊಡುಗೆಯ ಬಗ್ಗೆ ಕಾರ್ಯಕ್ರಮಗಳನ್ನು ಕ್ರೀಡಾ ಕ್ಲಬ್ ಮುಂಖಾತರ ಆಯೋಜಿಸುವುದು. |

20.10.2020

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ರವರಿಗೆ ಸೂಕ್ತಕ್ರಮಕ್ಕಾಗಿ.
2. ಕಛೇರಿ ಪ್ರತಿ.